ತೆರೆದುಕೊಳ್ಳದೆ ನಿರಂತರ ಮುಚ್ಚಿಕೊಂಡೇ ಇರುವ ಕಾಡು ಅನಿರೀಕ್ಷಿತತೆಯ ಮೂಲಕ ಸವಾಲಾಗುವುದು ಸಹಜ. ಈಗ ಅಂಥ ಯಾವ ಲಕ್ಷಣಗಳು ಅಜ್ಜಿಕಲ್ಲು ಕಾಡಿನಲ್ಲಿ, ಆ ದಾರಿಯಲ್ಲಿ ಉಳಿದಿರಲಿಲ್ಲ. ಸೋಂಪ ಬಂದು ರಬ್ಬರ್ ತೋಟದೊಳಗೆ ಪೀಡೆ, ಭೂತ, ಪಿಶಾಚಿ, ರಣ ಎಂದೆಲ್ಲಾ ಇದೆ, ಅವೆಲ್ಲ ಹಗಲಿಡೀ ಓಡಾಡುತ್ತವೆ ಎಂದಾಗ ಬಯಲಲ್ಲೂ ಕೂಡಾ ಭಯ ಹುಟ್ಟಿಕೊಂಡಿತು. ಬರೀ ಸೋಂಪನೊಬ್ಬನಿಂದ ಇಂಥ ಗಾಳಿ ಸುದ್ದಿ ಊರಿಡೀ ಹರಡಲಿಕ್ಕೆ ಸಾಧ್ಯವಿಲ್ಲ. ಗುಡ್ಡದಾರಿಯಲ್ಲಿ, ಬೈಲುದಾರಿಯಲ್ಲಿ ಅಡ್ಡಾಡುವ ಸಾಮಾನ್ಯ ಜನರು ಕೂಡಾ ನಿಧಾನವಾಗಿ ಅಜ್ಜಿಕಲ್ಲು ಭೂತದ ಬಗ್ಗೆ ಮಾತನಾಡತೊಡಗಿದರು. ರಬ್ಬರ್ ಬರುವ ಮುಂಚೆ ಇತ್ತಂತೆ ಈಗ ಎಲ್ಲಿಯ ಭೂತ? ದೈವ? ಎನ್ನುವವರ ಸಂಖ್ಯೆ ಒಂದಷ್ಟು ಇದ್ದರೂ ನಮ್ಮ ನಾರ್ಣಣ್ಣ ಮಾತ್ರ, ''ಇಲ್ಲ ಎನ್ನಲಾರೆ. ಕಾಡು ಕಡಿದು ಇಲ್ಲಿಯ ನಾಟಾಗಳನ್ನು ಲಾರಿಗೆ ಲೋಡು ಮಾಡುವಾಗ ಮರ, ಲಾರಿಯಡಿಗೆ ಬಿದ್ದು ಮೂರು ನಾಲ್ಕು ಮಂದಿಯಾದರೂ ಇಲ್ಲಿ ಸತ್ತಿರಬಹುದು. ಹೀಗೆ ಬಾಯಿಗೆ ನೀರಿಲ್ಲದೆ ಸತ್ತವರು ರಣ ಆಗದೆ ಇನ್ನೇನು ಆಗುತ್ತಾರೆ?'' ಎಂದಾಗ ನಮ್ಮ ಎದೆ ನಡುಗಿತ್ತು.

ನಾರ್ಣಣ್ಣ ಹೇಳಿದ ರಣದ ಕಥೆಯನ್ನೇ ಸ್ವಲ್ಪ ಬದಲಾಯಿಸಿಕೊಂಡು ಒಂದಷ್ಟು ಕೃಷಿ ಕೂಲಿಯಾಳುಗಳು, ನೇಜಿ ನೆಡುವ ಗಯ್ಯಾಳಿ ಹೆಂಗಸರು ತೋಟ, ಗದ್ದೆ, ಹೊಲಗಳಲ್ಲಿ ಬಣ್ಣ ಕಟ್ಟಿ ಹೇಳಲಾರಂಭಿಸಿದ ಮೇಲೆ ಕೌಡಿಚ್ಚಾರಿಗೆ ಹೋಗುವ ಅಜ್ಜಿಕಲ್ಲು ದಾರಿ ನಮ್ಮಂಥ ಮಕ್ಕಳಿಗೆ ಮತ್ತಷ್ಟು ದುರ್ಗಮವಾಗತೊಡಗಿತು. ಒಬ್ಬೊಬ್ಬರೇ ಹೋಗುವುದನ್ನು ಬಿಟ್ಟು ಸೋಂಪ, ಶಾಂತಣ್ಣ, ಬಟ್ಯಪ್ಪ, ನಾನು ಹೀಗೆ ಗುಂಪು ಗುಂಪಾಗಿ ಹೋಗುತ್ತಿದ್ದೆವು. ಎಲ್ಲೂ ನಮಗೆ ಭೂತ ದರ್ಶನ ಆಗಲಿಲ್ಲ.

ಅವತ್ತು ಕೌಡಿಚ್ಚಾರಿನಲ್ಲಿ ಭಜನಾ ಮಂದಿರದ ವತಿಯಿಂದ 'ದೇವುಪೂಂಜ ಪ್ರತಾಪ' ಆಟ, ಬಯಲಾಟ. ನಮ್ಮ ಎಟ್ಯಡ್ಕ ಶಾಲೆಯ ಏಕೈಕ ಆಳ್ವ ಮೇಷ್ಟ್ರು ಅವತ್ತು ಆ ಆಟದಲ್ಲಿ ದೇವುಪೂಂಜನ ವೇಷ ಹಾಕುತ್ತಾರೆ, ನಾವೆಲ್ಲ ಅವರ ಶಿಷ್ಯರಾಗಿ ಹೋಗದಿದ್ದರೆ, ರಂಗಸ್ಥಳದ ಮುಂಭಾಗದಲ್ಲೇ ನೆಲದಲ್ಲಿ ಕೂತು ಅವರ ರಂಗಪ್ರವೇಶ ಆದಾಗ ಸಿಳ್ಳು, ಚಪ್ಪಾಳೆ ಹೊಡೆಯದಿದ್ದರೆ ಮಹಾ ಅಪರಾಧವಾದೀತು ಎಂದು ವಾರದ ಮೊದಲೇ ತೀರ್ಮಾನಿಸಿ ಹೊರಟೂ ಆಯಿತು. ಕತ್ತಲುಕತ್ತಲಾಗಿತ್ತು. ಅದೇ ದೈವದ ಹಾದಿ ಅಜ್ಜಿಕಲ್ಲು ಇಳಿದು ಆಚಾರಿಮೂಲೆ ದಾಟಿ ಕೌಡಿಚ್ಚಾರಿಗೆ ಹತ್ತಿರ ಹತ್ತಿರ ಆಗಿದ್ದೇವೆ. ಶಾಂತಣ್ಣ ದಾರಿಯುದ್ದಕ್ಕೂ ಎಷ್ಟು ಬೊಬ್ಬೆ ಹೊಡೆಯುತ್ತಿದ್ದನಂದ್ರೆ ಭೂತ, ದೈವ, ಪಿಶಾಚಿ ಎಲ್ಲಾ ಅವನ ರಣರಂಪಾಟಕ್ಕೆ ಓಡಿ ಹೋಗಬೇಕಾಗಿತ್ತು. ಅವನ ಬೊಬ್ಬೆಗೆ ಉಳಿದ ನಮ್ಮ ಹಿಮ್ಮೇಳ ಕಡಿಮೆಯೇನೂ ಇರಲಿಲ್ಲ.

ಹಿಂದುಗಡೆಯಿಂದ ಪಟಪಟಾಂತ ಏನೋ ಓಡಿಸಿಕೊಂಡು ಬಂತು. ಸೋಂಪ ಏಕ್‌ದಂ ಓಡಲಾರಂಭಿಸಿದ. ನನಗೂ ಆ ಸದ್ದು ರಬ್ಬರ್ ಮರಗಳೆಡೆಯಿಂದ ಕೇಳಿಸಿತ್ತು. ಬೊಬ್ಬೆಯ ಗುಂಗಿನಲ್ಲಿದ್ದ ಶಾಂತಣ್ಣನಿಗೆ ಕೇಳಿಸಿತ್ತೋ ಗೊತ್ತಿಲ್ಲ. ಅವನೂ ಸೋಂಪನ ಹಾದಿ ಹಿಡಿದು, ನಾವೂ ಅವರ ಬೆನ್ನಿಗೆ ಕಡಿಮೆಯಿಲ್ಲ ಎಂದು ಓಡಲಾರಂಭಿಸಿದೆವು. ನಾವು ಹಿಂದುಗಡೆಯಿಂದ, ಸೋಂಪ–ಶಾಂತಣ್ಣ ಮುಂದುಗಡೆಯಿಂದ, ಸೀದಾ ಒಂದೇ ಭರ ಕೌಡಿಚ್ಚಾರಿನ ಡಾಂಬರು ರಸ್ತೆಯಲ್ಲಿ ಹೋಗಿ ನಿಂತೆವು. ಅಲ್ಲೆಲ್ಲಾ ಆಗಲೇ ಆಟಕ್ಕೆ ಜನ ಸೇರಿದ್ರು. ಮೈಕ್ ಸದ್ದು, ರಸ್ತೆಯಲ್ಲಿ ಓಡಾಡುವ ವಾಹನಗಳು, ಅವುಗಳ ಲೈಟ್ ನಮಗೆ ನಾಲ್ವರಿಗೂ ಜೀವ ಬಂದಂತಾಯಿತು. ಉಸ್ಸಪ್ಪಾ ಎಂದು ಕಟ್ಟೆಯಲ್ಲಿ ಕೂತು ನಿಟ್ಟುಸಿರು ಎಳೆದು ವಾಸ್ತವಕ್ಕೆ ಬಂದೆವು.

''ನಾನು ಹೇಳಿದ್ದಲ್ವ...'' ಸೋಂಪ ಶುರು ಮಾಡಿದ. ''ಅದು ಹೇಗಿತ್ತು? ನಾನು ನೋಡಿಲ್ಲ...'' ಶಾಂತಣ್ಣ ಸ್ವರ ತೆಗೆದ. ರಬ್ಬರ್ ಗಿಡಗಳ ಮೇಲಿಂದ ಪಟಪಟಾಂತ ಎದ್ದು ಬಂದ ಸದ್ದನ್ನು ನಾನೂ ಕಿವಿಯಾರೆ ಕೇಳಿದ್ದ ಕಾರಣ ನನ್ನ ಮುಖಲಕ್ಷಣ ನೋಡಿ ಶಾಂತಣ್ಣ, ಬಟ್ಯಪ್ಪ ಪೂರ್ತಿ ನಂಬಿದ್ದರು.